# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-1705/2015/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 11/7/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ರಕ್ಷಿತ್, ಸದಸ್ಯರು, ಶಾನುವಳ್ಳಿ ಗ್ರಾಮಪಂಚಾಯಿತಿ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಮತ್ತು ಶ್ರೀ.ಹಿರಿಯಣ್ಣಗೌಡ, ನಿವೃತ್ತ ಕಂದಾಯ ಇಲಾಖೆಯ ನೌಕರ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀಮತಿ.ಡಾಕಮ್ಮ ಕೋಂ ಅಣ್ಣೇಗೌಡ, ಕರುವಾನೆ, ಬಿಲಗದ್ದೆ ಗ್ರಾಮ, ಹರಿಹರಪುರ ಹೋಬಳಿ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ರಕ್ಷಿತ್, ಸದಸ್ಯರು, ಶಾನುವಳ್ಳಿ ಗ್ರಾಮಪಂಚಾಯಿತಿ, ಮತ್ತು ಶ್ರೀ.ಹಿರಿಯಣ್ಣಗೌಡ, ನಿವೃತ್ತ ಕಂದಾಯ ನಿರೀಕ್ಷಕರು, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಬಿಲಗದ್ದೆ ಗ್ರಾಮದ ಸಸಿತೋಟದ ವಾಸಿಗಳಾದ ಶ್ರೀ.ಹಿರಿಯಣ್ಣಗೌಡ ಇವರು ರೆವಿನ್ಯೂ ಸೆಕ್ರೆಟರಿಯಾಗಿ ಆಗುಂಬೆ, ಕೊಣಂದೂರು ಮತ್ತು ಶಿವಮೊಗ್ಗದಲ್ಲಿ ಕರ್ತವ್ಯ ನಿರ್ವಹಿಸಿದ್ದು, ಈಗ ನಿವೃತ್ತಿ ಹೊಂದಿರುತ್ತಾರೆ. ಅವರು ಸ.ನಂ.137 ಸರ್ಕಾರಿ ಜಮೀನಿನಲ್ಲಿ 2 ಎಕರೆಗೂ ಮೇಲ್ಪಟ್ಟು ಅಡಿಕೆ ತೋಟ ನಿರ್ಮಿಸಿ ಮನೆಯ ಸುತ್ತಲೂ 20 ಗುಂಟೆಗೂ ಮೇಲ್ಪಟ್ಟು ಅತಿಕ್ರಮಿಸಿಕೊಂಡಿರುತ್ತಾರೆ. ಸ.ನಂ.137, 223 ರಲ್ಲಿ ಸುಮಾರು 10 ಎಕರೆ 5 ಗುಂಟೆ ಸರ್ಕಾರಿ ಜಮೀನು ಅತಿಕ್ರಮಿಸಿಕೊಂಡಿರುವುದು ತಾಲ್ಲೂಕು ಸರ್ವೆಯರ್‌ರವರಿಂದ ಸರ್ವೆ ನಡೆಸಿದಾಗ ಸಾಬೀತಾಗುತ್ತದೆ. ಅವರ ಮಗನಾದ ಶ್ರೀಯುತ.ರಕ್ಷಿತ್ 2010-15 ರ ಅವಧಿಯಲ್ಲಿ ಶಾನುವಳ್ಳಿ ಗ್ರಾಮಪಂಚಾಯಿತಿ ಸದಸ್ಯನಾಗಿದ್ದು, ಪಂಚಾಯಿತಿಗೆ ಬರುವ ಅನುದಾನಗಳನ್ನು ನುಂಗುತ್ತಿದ್ದಾರೆ. ಗ್ರಾಮಕ್ಕೆ ಬಂದ ಕಾಮಗಾರಿಗಳನ್ನು ನಿಯಮಾನುಸಾರ ಪೂರ್ಣಗೊಳಿಸದೆ ಅಧಿಕಾರಿಗಳೊಂದಿಗೆ ಜೊತೆಗೂಡಿ ಅನುದಾನಗಳನ್ನು ಖರ್ಚು ಮಾಡಿರುತ್ತಾರೆ. 3-4 ಬಾರಿ ರಸ್ತೆ ನಿರ್ಮಿಸಿ ಬೇರೆ ಕಡೆಯ ಕಾಮಗಾರಿಯ ಹಣವನ್ನು ತೋರಿಸಿ ಬಿಲ್ ಮಾಡಿಸಿರುತ್ತಾರೆ. ಗ್ರಾಮಪಂಚಾಯಿತಿಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಂದ ಅನುದಾನದಿಂದ ಕಾಮಗಾರಿಗಳನ್ನು

ಪೂರ್ಣಗೊಳಿಸದೆ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಹಳೆ ನಕಾಶೆ ಕಂಡ ಕೆರೆಗಳ ದಾಖಲೆಗಳನ್ನು ನಾಶಪಡಿಸಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಕಳುಹಿಸಿದ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

4) ದೂರುದಾರರು ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿ ಎದುರುದಾರರು ಅರಣ್ಯ ಮತ್ತು ಕಂದಾಯ ಅಧಿಕಾರಿಗಳನ್ನು ಬಳಸಿಕೊಂಡು ಕಿರುಕುಳ ನೀಡುತ್ತಿದ್ದಾರೆ. ಆ ಬಗ್ಗೆ ವಿಚಾರಣೆ ನಡೆಯುತ್ತಿದೆ. ಸರ್ಕಾರಿ ಜಮೀನನ್ನು ಅತಿಕ್ರಮಿಸಿಕೊಂಡು ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿರುತ್ತಾರೆಂದು ಹೇಳಿರುತ್ತಾರೆ.

5) ದೂರುದಾರರ ಮಾಡಿರುವ ಆಪಾದನೆಗಳು ಗಂಭೀರ ಆಪಾದನೆಗಳೆಂದು ಕಂದುಬಂದ ಕಾರಣ ಸದರಿ ಆಪಾದನೆಗಳ ಬಗ್ಗೆ ಜಂಟಿ ತನಿಖೆ ವರದಿಯನ್ನು ಸಲ್ಲಿಸುವಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಹಾಗೂ ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪವಿಭಾಗ ಇವರಿಗೆ ಆದೇಶಿಸಲಾಗಿತ್ತು.

6) ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರು ಜಂಟಿ ತನಿಖಾ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

   i. ದಿ.21/2/17 ರಂದು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದ್ದು, ಅರ್ಜಿದಾರರಾದ ಶ್ರೀಮತಿ.ಡಾಕಮ್ಮ ಕೋಂ ಅಣ್ಣೇಗೌಡ ಇವರು ಸ.ನಂ.137 ಮತ್ತು 223 ಕ್ಕೆ ಸೇರಿದ ಸರ್ಕಾರಿ ಜಾಗದಲ್ಲಿ ಒತ್ತುವರಿ ಮಾಡಿಕೊಂಡು ಅದರಲ್ಲಿ ಶೆಡ್ ನಿರ್ಮಿಸಿಕೊಂಡು ವಾಸವಾಗಿರುವುದು ಕಂಡುಬಂದಿರುತ್ತದೆ.

   ii. ಅರ್ಜಿದಾರರು ಶೆಡ್ ನಿರ್ಮಿಸಿಕೊಂಡು ವಾಸವಾಗಿರುವ ಜಾಗಕ್ಕೆ ಸುಮಾರು 100 ಅಡಿ ದೂರದಲ್ಲಿ ಸ್ವಂತ ಹಿಡುವಳಿ ಜಾಗವಿದ್ದರೂ ಸುಮಾರು 10 ಗುಂಟೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಅದರಲ್ಲಿ ಶೆಡ್ ನಿರ್ಮಿಸಿಕೊಂಡು ವಾಸವಾಗಿರುತ್ತಾರೆ. ಇದು ಮೇಲ್ನೋಟಕ್ಕೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡುವ ಉದ್ದೇಸವೇ ಆಗಿರುವುದಾಗಿ ವರದಿ ಮತ್ತು ದಾಖಲಾತಿಯಿಂದ ತಿಳಿದುಬಂದಿರುತ್ತದೆ.

   iii. ಬಿಲಗದ್ದೆ ವಾಸಿ ಹಿರಿಯಣ್ಣಗೌಡ, ಅವರ ಅಣ್ಣ ದೇಕಣ್ಣಗೌಡ ಮತ್ತು ಮಗ ರಕ್ಷಿತ್ ಇವರು ಸ.ನಂ.137 ಮತ್ತು 223 ಕ್ಕೆ ಸೇರಿವ ಸುಮಾರು 10-05 ಎಕರೆ ಸರ್ಕಾರಿ ಗೋಮಾಳವನ್ನು ಒತ್ತುವರಿ ಮಾಡಿದ್ದು, ಸದರಿ ಒತ್ತುವರಿಯನ್ನು 2014ನೇ ಸಾಲಿನಲ್ಲಿ ತೆರವು ಮಾಡಿರುವುದಾಗಿ ತಹಶೀಲ್ದಾರ್, ಕೊಪ್ಪ ಇವರು ವರದಿ ನೀಡಿರುತ್ತಾರೆ.

   iv. ಬಿಲಗದ್ದೆ ವಾಸಿ ಹಿರಿಯಣ್ಣಗೌಡ, ಅವರ ಅಣ್ಣ ದೇಕಣ್ಣಗೌಡ ಮತ್ತು ಮಗ ರಕ್ಷಿತ್ ಇವರು ಒತ್ತುವರಿ ಮಾಡಿಕೊಂಡಿದ್ದ ಸ.ನಂ.137 ಮತ್ತು 223 ಕ್ಕೆ ಸೇರಿದ ಸುಮಾರು 10-05 ಎಕರೆ ಸರ್ಕಾರಿ ಗೋಮಾಳನ್ನು 2014ನೇ ಸಾಲಿನಲ್ಲಿ ತೆರವು ಮಾಡಿದ್ದರೂ ಸಹ ನಂತರ ಇವರುಗಳ ಜಮೀನಿಗೆ ಹೊಂದಿಕೊಂಡಿರುವ ಸ್ವಲ್ಪ ಸರ್ಕಾರಿ ಜಾಗವನ್ನು ಪುನಃ ಒತ್ತುವರಿ

ಮಾಡಿಕೊಂಡಿರುವುದಾಗಿ ತಿಳಿದು ಬಂದಿರುತ್ತೆ ಎಂದು ವಿಚಾರಣಾ ಅಧಿಕಾರಿಗಳು ವರದಿಯನ್ನು ನೀಡಿರುತ್ತಾರೆ.

v. ಅರ್ಜಿದಾರರು ಸ.ನಂ.137 ಮತ್ತು 223 ರಲ್ಲಿನ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಿರುವ ಮನೆಗೆ ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ, ಮನೆ ನಂಬರ್ ನೀಡಿದ್ದು, ಇವರಿಗೆ ಬದಲಿ ವ್ಯವಸ್ಥೆ ಮಾಡಿ ಒತ್ತುವರಿಯನ್ನು ತೆರವು ಗೊಳಿಸಬಹುದಾಗಿರುತ್ತೆಂದು ವಿಚಾರಣಾಧಿಕಾರಿಗಳು ವರದಿ ನೀಡಿರುತ್ತಾರೆ.

vi. ಅರ್ಜಿದಾರರು ಅರ್ಜಿಯಲ್ಲಿ ಆಪಾದಿಸಿರುವಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಳ್ಳಲು ಎದುರುದಾರರಿಗೆ ಸಹಕರಿಸಿರುತ್ತಾರೆ ಎಂಬ ಆರೋಪಕ್ಕೆ ಪೂರಕವಾದ ಸಾಕ್ಷ್ಯಗಳು ಕಂಡುಬಂದಿರುವುದಿಲ್ಲ. ಇದು ಮೇಲ್ನೋಟಕ್ಕೆ ಸುಳ್ಳು ಮತ್ತು ಸತ್ಯಕ್ಕೆ ದೂರವಾದದ್ದು ಎಂದು ತಿಳಿದು ಬಂದಿರುತ್ತೆ.

vii. ಹಿರಿಯಣ್ಣಗೌಡ, ಅವರ ಅಣ್ಣ ಡೇಕಣ್ಣಗೌಡ ಮತ್ತು ಮಗ ರಕ್ಷಿತ್ ಇವರು ಒತ್ತುವರಿ ಮಾಡಿಕೊಂಡಿದ್ದ ಬಿಲಗದ್ದೆ ಗ್ರಾಮದ ಸ.ನಂ.137 ಮತ್ತು 223 ರಲ್ಲಿನ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ತೆರವು ಮಾಡಿಸಿದ್ದರೂ ಸಹ ಜಮೀನಿನ ಅಂಚಿಗೆ ಹೊಂದಿಕೊಂಡಿರುವ ಸ್ವಲ್ಪ ಸರ್ಕಾರಿ ಜಾಗವನ್ನು ಪುನಃ ಒತ್ತುವರಿ ಮಾಡಿಕೊಂಡಿರುವುದಾಗಿ ಸ್ಥಳೀಯರು ಮತ್ತು ಕೆಲವು ಸಿಬ್ಬಂದಿಗಳು ಮಾಹಿತಿ ನೀಡಿರುವುದರಿಂದ ಈ ಕುರಿತು ಪುನಃ ಸರ್ವೆ ಮಾಡಿಸಿ ಒತ್ತುವರಿಯಾಗಿರುವುದು ಕಂಡುಬಂದಲ್ಲಿ ಸದರಿ ಒತ್ತುವರಿ ಮಾಡಿರುವ ಸರ್ಕಾರಿ ಜಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಆದೇಶ ನೀಡಬೇಕಾಗಿರುತ್ತೆ.

viii. 2010-11 ರಿಂದ 2015 ರವರೆಗಿನ ಅವಧಿಯಲ್ಲಿ ಶ್ರೀ.ರಕ್ಷಿತ್ ಬಿನ್ ಹಿರಿಯಣ್ಣಗೌಡ ಗ್ರಾಮಪಂಚಾಯಿತಿ ಸದಸ್ಯರಾಗಿದ್ದಾಗ ಗ್ರಾಮಪಂಚಾಯಿತಿಗೆ ಸರ್ಕಾರದಿಂದ ಬರುವ ಅನುದಾನದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದು ಆರೋಪ ಮಾಡಿದ್ದು, ಈ ಬಗ್ಗೆ ಕೆಲವು ಕಾಮಗಾರಿಗಳ ಸ್ಥಳ ಪರಿಶೀಲನೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಭೌತಿಕವಾಗಿ ಕೆಲಸವಾಗಿರುವುದು ಕಂಡುಬಂದಿದ್ದು, ಹಣ ದುರುಪಯೋಗವಾದ ಬಗ್ಗೆ ಸೂಕ್ತ ಸಾಕ್ಷ್ಯಗಳು ಕಂಡು ಬಂದಿರುವುದಿಲ್ಲವೆಂದು ಅಧಿಕಾರಿಗಳು ಜಂಟಿ ವರದಿಯಲ್ಲಿ ಹೇಳಿರುತ್ತಾರೆ.

7) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 1ನೇ ಎದುರುದಾರರಾದ ರಕ್ಷಿತ್ ಎಂಬುವರು ಶಾನುವಳ್ಳಿ ಗ್ರಾಮಪಂಚಾಯತ್ ಸದಸ್ಯರಾಗಿದ್ದುಕೊಂಡು ಸರ್ಕಾರಿ ಗೋಮಾಳ ಜಮೀನನ್ನು ಒತ್ತುವರಿ ಮಾಡಿರುವುದು ಕಂಡುಬರುತ್ತದೆ. ಎದುರುದಾರರು ಮಾಡಿರುವ ಒತ್ತುವರಿಯನ್ನು 2014 ರಲ್ಲಿ ತೆರವು ಮಾಡಿದ್ದರೂ ಸಹ ನಂತರದಲ್ಲಿ ಪುನಃ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವ ಅಂಶ ವಿಚಾರಣಾ ವರದಿಯಲ್ಲಿ ಕಂಡುಬರುತ್ತದೆ. ಪಂಚಾಯತ್ ಸದಸ್ಯನಾಗಿದ್ದುಕೊಂಡು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವುದು 1ನೇ

ಎದುರುದಾರರ ಅಧಿಕಾರ ದುರುಪಯೋಗದ ಅಂಶವನ್ನು ತೋರಿಸುತ್ತದೆ. ಆದ್ದರಿಂದ ಅವರ ವಿರುದ್ಧ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಸೂಕ್ತ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದೆ.

8) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ದೂರುದಾರರು ಹಾಗೂ ಎದುರುದಾರರು ಸರ್ಕಾರಿ ಗೋಮಾಳ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ವಿಚಾರಣಾಧಿಕಾರಿಯವರು ಸ್ಪಷ್ಟವಾದ ಅಭಿಪ್ರಾಯವನ್ನು ನೀಡಿರುವ ಕಾರಣ ಸದರಿಯವರನ್ನು ಸರ್ಕಾರಿ ಜಮೀನಿನಿಂದ ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/7/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.